# ನಕ್ಕುಬಿಡಿ




ಅಂಗಡಿ ಬಾಗಿಲಲ್ಲಿ ಒಂದು ಬೋರ್ಡ್ ಹೀಗಿತ್ತು;

ನಿಮ್ಮ ಅನುಕೂಲಕ್ಕಾಗಿ ಈ ಅಂಗಡಿ ಸದಾ ತೆರೆದಿರುತ್ತದೆ. ಬೇರೆ ಎಲ್ಲೋ ಹೋಗಿ ಮೋಸ ಹೋಗಬೇಡಿ. ಇಲ್ಲಿಗೇ ಬನ್ನಿ!

★★★

ಗಂಡಾಳು ಅಳುತ್ತಾ ಯಜಮಾನರ ಹತ್ತಿರ ಬಂದು 'ಸಾಹೇಬರೇ ಅಮ್ಮಾವರು ನನ್ನ ಕೆನ್ನೆಗೆ ಹೊಡೆದು ಬಿಟ್ಟರು' ಎಂದ.

ಯಜಮಾನ: ಅದಕ್ಕೇನೀಗ? ನಾನು ಎಂದಾದರೂ ಅತ್ತಿದ್ದನ್ನು ನೀನು ಕಂಡಿದ್ದೀಯಾ?

★★★

ಆತ: ರಾಜಕಾರಣಿಗೂ ಜೋತಿಷಿಗೂ ಏನು ವ್ಯತ್ಯಾಸ ಹೇಳು ನೋಡೋಣ?

ಈತ: ರಾಜಕಾರಣಿ ಸದಾ ಹಣ, ಹಣ ಎಂದರೆ ಜೋತಿಷಿ ಗ್ರಹಣ, ಗ್ರಹಣ ಎನ್ನುತ್ತಿರುತ್ತಾನೆ.

■ (ಸಂಗ್ರಹ) ಎ.ಕೆ. ಪಟ್ಟಾಭಿ

ಪೊಲೀಸ್: ಏನಮ್ಮಾ, ನೀನು 100 ಕಿಲೋಮೀಟರ್ ವೇಗದಲ್ಲಿ ಕಾರು ಓಡಿಸುತ್ತಿದ್ದೀಯಲ್ಲಾ.

ರಾಗಿಣಿ: ಅರೆ ಹೌದಾ ಸಾರ್? ನಾನು ಡ್ರೈವಿಂಗ್ ಕಲಿತು ಇನ್ನೂ 10 ದಿನ ಕೂಡಾ ಆಗಿಲ್ಲ. ಎಂಥಾ ಪ್ರಗತಿ ನೋಡಿ.

★★★

ಕೂಲಿಯಾಳು: ಸಾರ್ ಕೇವಲ ಐದು ರೂಪಾಯಿ ತೆಗೆದುಕೊಳ್ಳುವುದೆಂದರೆ ನನಗೆ ಅವಮಾನವಾಗುತ್ತೆ, ದಯವಿಟ್ಟು ಇನ್ನೊಂದ್ಐದು ರೂಪಾಯಿ ಕೊಡಿ.

ಗುಂಡ: ಇನ್ನೊಮ್ಮೆ ಐದು ರೂಪಾಯಿ ಕೊಟ್ಟು ಮತ್ತೆ ನಿನಗೆ ಅವಮಾನ ಮಾಡುವ ಮನಸ್ಸು ನನಗಿಲ್ಲ.

★★★

ಕಂಠಮಟ್ಟ ಕುಡಿದು ಮನೆಗೆ ಬಂದಿದ್ದ ಗುಂಡ ಲ್ಯಾಪ್‌ಟ್ಯಾಪ್‌ನಲ್ಲಿ ಏನನ್ನೋ ಟೈಪ್ ಮಾಡುವ ಹಾಗೆ ನಟಿಸುತ್ತ ಕುಳಿತಿದ್ದ.

ಹೆಂಡತಿ: ರೀ, ಏನ್ರೀ ಮತ್ತೆ ಕುಡಿದು ಬಂದಿದ್ದೀರಾ?

ಗುಂಡ: ಅಯ್ಯೋ ಇಲ್ಲಾ ಕಣೆ.

ಹೆಂಡತಿ: ಮತ್ತೆ ಬ್ರೀಫ್‌ಕೇಸ್ ಇಟ್ಟುಕೊಂಡು ಏನು ಮಾಡ್ತಾ ಇದೀರಾ?

★★★

ಗುಂಡ: ತೀರ್ಥಯಾತ್ರೆಗೆ ಹೋಗಿ ಬರೋಣಾಂತ ಇದೀನಿ. ಅದಕ್ಕೆ ವಿಸ್ಕಿ, ಸಾರಾಯಿ ಕೂಡ ಬಿಟ್ಟು ಬಿಡೋಣಾಂತ ಅಂದುಕೊಂಡಿದ್ದೀನಿ.

ಗೆಳೆಯ: ಎಂಥಾ ಒಳ್ಳೆಯ ವಿಚಾರ! ಹೋಗಿ ಬಾ. ಅದಕ್ಯಾಕೆ ಯೋಚನೆ ಮಾಡ್ತಾ ಇದೀಯಾ?

ಗುಂಡ: ಅದೇ ಯಾರ ಹತ್ರ ಬಿಟ್ಟು ಹೋಗಲಿ ಅಂತ?

■ (ಸಂಗ್ರಹ)ಎಂ.ಕೆ. ಮಂಜುನಾಥ್


